ಅಂಬಿಕಾತನಯದತ್ತ

ಪ್ರತಿಭಾ ಗ್ರಂಥಮಾಲೆ, ಧಾರವಾಡ

ಮೂರ್ತಿ

ಮತ್ತು

ಕಾಮಕಸ್ತೂರಿ

★

ಅಂಬಿಕಾತನಯದತ್ತ

ಒಂದನೆಯ ಮುದ್ರಣ ೧೯೩೪
ಎರಡನೆಯ ಮುದ್ರಣ ೧೯೪೭
ಮೂರನೆಯ ಮುದ್ರಣ ೧೯೫೫

ಬೆಲೆ: ೦—೧೨—೦

ಮುದ್ರಕರು ಮತ್ತು ಪ್ರಕಾಶಕರು:
ಭಾಲಚಂದ್ರ ಘಾಣೇಕರ
ಪ್ರತಿಭಾ ಮುದ್ರಣ, ಧಾರವಾಡ.

ಕವನ ಸಂದರ್ಭ

೧೯೨೪ ರಲ್ಲಿ ಒಮ್ಮೆ ತತ್ವಚಿಂತನೆಯಲ್ಲಿದ್ದಾಗ್ಗೆ " ಆತ್ಮವು ಒಂದು ಕಲ್ಲು; ಬರಿ ಉಂಟು " ಎನಿಸಿತು. ಮುಂದೊಮ್ಮೆ ಸಾಂಖ್ಯಯೋಗ ಕುರಿತು ಓದುವಲ್ಲಿ 'ದೃಶದವತ್' ಎಂಬ ಮಾತು ಕೈವಲ್ಯಬೋಧ ವಿಚಾರದಲ್ಲಿ ಬಂದಿತು. ಚಮತ್ಕೃತನಾದೆ. ಇನ್ನೊಮ್ಮೆ ಇತಿಹಾಸ ದರ್ಶನವನ್ನು ಪರ್ಯಾಲೋಚಿಸುವಾಗ ಮಾನವ ಮೂರ್ತಿಯ ವೈಭವವೆಲ್ಲ–ಯಾರದೋ ಕನಸು, ಯಾರದೋ ಕಲೆ, ಯಾರದೋ ಭಾವ, ಏನೋ ಲೀಲೆ, ಎಂದು ಧ್ವನಿತವಾಯಿತು. ನನ್ನದೂ ಹಾಗೇ ಅಲ್ಲವೇ ಎಂದು ತೋಚಿತು. ಬಾಳಿನ ಒಳುಗತೆಯ ಚಿರಂತನ ಚಿತ್ರ—ಈ ಮೂರ್ತಿ ಜೀವನ ಎಂದು ನೆಲೆಗೊಂಡಿತು ಎದೆಯಲ್ಲಿ.

೧೯೨೮ರಲ್ಲಿ ಗೆಳೆಯ ಗೋಕಾಕರವರೊಡನೆ ಸಂವಾದ ನಡೆದಾಗ ಇದನ್ನೆ ದೃಷ್ಟಾಂತವಾಗಿ ಹೇಳಿದೆ. ೧೯೩೧ ರಲ್ಲಿ ಅವರು ತಮ್ಮೊಂದು ಕವನದಲ್ಲಿ ಇದನ್ನು ಕಹಿಯಾಗಿ ಬರೆದರು. ನವರಸರುಚಿರವಾದ ಈ ರೂಪ ಹೀಗೆ ಮೂಡಿಸಬಹುದೇ? ಎಂದೆ; ಅದೇ ವರುಷ ಮೇ ತಿಂಗಳಲ್ಲಿ ಕವನದ ಹೊಳಹು ಹಾಕಿ ೫ ಭಾಗ ಬರೆದೆ. ಒಂದು 'ಗರಿ' ಯಲ್ಲಿ ಬೆಳಕು ಕಂಡಿತು. ಮುಂದೆ ಜಯಕರ್ನಾಟಕದ ಕೋಲಾಹಲದಲ್ಲಿ ಗುಂಪಿನ ಮುಂಗಳವೆತ್ತಿದಾಗ ೪ ಭಾಗ ಬರೆದೆ. ೧೯೩೩ ರ ಆದಿಯಲ್ಲಿ ಮುದ್ರಣೆಗೆ ಸಿದ್ಧಗೊಳಿಸುವಾಗ ನಾಲ್ಕಾರು ಕಡೆಗೆ ತಿದ್ದಿದ್ದೇನೆ, ಎಂಟು ಹತ್ತು ಸಾಲು ಸೇರಿಸಿದ್ದೇನೆ. ಈಗಿದ್ದ ಮೂರ್ತಿ ಹೀಗಿದೆ.

ಕವನದ ವಾಸ್ತುವಿನ್ಯಾಸದ ಬಗ್ಗೆ ಎರಡು ಮಾತು ಹೇಳಬಹುದು. ಮೊದಲ ಮತ್ತು ಕೊನೆಯ ಅಷ್ಟಷಟ್ಪದಿಗಳು ಮುಂಬಲ ಬೆಂಬಲದಂತಿವೆ ಕವನಕ್ಕೆ. ಕವನದ ಮೊದಲುಭಾಗವಾದ 'ಅಚಿಂತ್ಯ' ವು ರೂಪಕಾನ್ಯೋಕ್ತಿಯ

ತತ್ವಮುಖವಾಗಿದೆ. 'ಕೊನೆಯ ಹಾಡು' ಭಾವಫಲ. ಅಚಿಂತ್ಯ ಲೀಲೆಯಲ್ಲಿ ಸಂವೇದನಾಗಮ್ಯವಾದುದು—

'ರಸವೆ ಜನನ
ವಿರಸ ಮರಣ
ಸಮರಸವೇ ಜೀವನಾ'

ಇಷ್ಟೆ! ಉಳಿದ ಭಾಗಗಳ ಪರಿಪಾಕಕ್ರಮವು ಪರ್ವ ಪರ್ವಕ್ಕೂ ಸ್ಫುಟವೇ ಆಗಿದೆ ಎಂದು ನಾನು ಭಾವಿಸಿದ್ದೆ—೧೯೩೪.

ಕಲಾಸೃಷ್ಟಿಯಲ್ಲಿಯೂ ಹಳೆಯ ಅನುಭವದ ಪ್ರಳಯಾಂಧಃಕಾರದೊಳಗಿಂದಲೇ ನವೀನ ಅನುಭವದ ಸೃಷ್ಟಿಯ ತರಂಗಗಳೇಳುವವು; ಹೊಸ ಮೂರ್ತಿಯ ದರ್ಶನವಾಗುವದು. ಮುಂದಿನ ಕವನದಲ್ಲಿರುವ 'ಮೂರ್ತಿ'ಯ [illegible]ಕದಲ್ಲಿ ನನ್ನ ಜೀವ ಒಂದು ನವೋನ್ಮೇಷವನ್ನು ಕಂಡಿತು. ಈ ಬಾಳಿನ ನಿಜವೇನು? ಎಂದು ನೆನಿಸಿದಾಗ ಅದರ ಗುಟ್ಟನ್ನು ಶಬ್ದದಲ್ಲಿ ಹಿಡಿದಿರಬೇಕು, ಸಂಖ್ಯೆಯಿಂದ ಅಳೆದು ತೋರಿಸಬೇಕು ಎಂಬ ಆಸೆ ಪ್ರಬಲವಾಗುವದು. ಅಮೇಯವಾದುದನ್ನು ಒಂದು ಪ್ರಮೇಯವೆಂಬಂತೆ ತರ್ಕತಾಂಡವಕ್ಕಿಳಿಸಿದಾಗ ವಾಚ್ಯದೊಳಗಿಂದ ಧ್ವನಿ ಹೊರಟಂತೆ, ತರ್ಕದ ಹಿಂದೆ ಒಂದು ಅತರ್ಕ್ಯವಾದ ಮೂರ್ತಿ ಎದ್ದು ನಿಲ್ಲುತ್ತದೆ. ಅಮರ ಜೀವಕ್ಕೆ ಅನಂತ ದೇವನಿಲ್ಲದೆ ಆನಂದವಿಲ್ಲ. ಪೌರುಷದ ಗಮ್ಯದಾಚೆಗೆ ಅಪೌರುಷೇಯದ ಆಗಮ್ಯವೊಂದು ತಲೆಯೆತ್ತುವದು. ಮನನದ ಭವ್ಯತೆಗೆ ಆತ್ಮ ಹೆಚ್ಚಲ್ಲ; ಕಲ್ಲು ಕಡಮೆಯಲ್ಲ. ಕಲ್ಲಿನ ಬಾಳಿನಲ್ಲಿಯೂ ಸ್ಫುಟವಾಗುವ ರಮ್ಯತೆಯು ಆತ್ಮಾನುಸಂಧಾನದ ಫಲವೇ. ಮನುಷ್ಯರಿಗಿದ್ದಂತೆ ಕಲ್ಲಿಗೂ ಅಸ್ತ, ಉದಯ, ಅಭ್ಯುದಯ, ನಿಶ್ರೇಯಸ್ಸು ಇದೆ. ಎಲ್ಲ ಮಾನವರೂ ತಲೆ ಬಾಗಬೇಕಾದ ರಾಜಪುರುಷರಿರುವಂತೆ ರಾಜರಿಂದಲೂ ಶಿರೋಧಾರ್ಯವಾದ ಮಣಿಗಳಿವೆ. ಎಲ್ಲರಿಗೂ ಪೂಜ್ಯರೆನಿಸುವ ಸಾಧುಗಳಿರುವಂತೆ, ಸಾಧುಗಳಿಗೂ ಪೂಜ್ಯ ಎನಿಸುವ ಪವಿತ್ರ ಪ್ರತಿಮೆ

ಗಳಿವೆ. ಪ್ರತಿಮೆಯ ಕಲ್ಲಿನಲ್ಲಿ ಯಾವದೋ ಭಕ್ತನ ಅಂತಃಕರಣದಲ್ಲಿ ಶಿಲ್ಪಿಯ ಉಳಿಯಲ್ಲಿ ಮೂಡಿ ಬರುವದುಂಟು. ಒಳ್ಳೆಯ ಕಲ್ಲಿಗೆ ಒಳ್ಳೆಯ ಮೂರ್ತಿಯಾಗುವ ಮೈಗುಣವಿರಬಹುದಂತೆ ಅತುಲನೀಯ ಅಲೌಕಿಕತೆಯನ್ನು ಕಲಾರೇಖೆಯಲ್ಲಿ ಕಾಣುವ ಭಕ್ತಿಯ ವ್ಯಂಗ್ಯ ದೃಷ್ಟಿ ಮಾನವನ ಹೃದಯಕ್ಕಿದೆ. ಒಂದು ಕಲ್ಲಿನ ಗುಣ, ಒಂದು ಅರಸು ಮನಸಿನ ಗುಣ, ಒಂದು ಶಿಲ್ಪಿಯ ಸಂಕಲ್ಪದ ಗುಣ, ಒಂದು ಜನತೆಯ ಭಾವುಕತೆಯ ಗುಣ—ಹೀಗೆ ರಸದ ಹನಿಗೆ ಹನಿ ಗೂಡಿ ಹಳ್ಳವಾಗುತ್ತದೆ. ಆಮೇಲೆ ಜನರ ಲೌಕಿಕತೆ, ಪೂಜಾರಿಗಳ ವಿಷಯ ಲೋಲುಪತೆ, ಮೂರ್ತಿಭಂಜಕರ ಧನದಾಶೆ—ಇವುಗಳ ಮುಪ್ಪುರಿ ರಸವನ್ನು ಅಚ್ಚಿಸಿ ಬಿಡುತ್ತದೆ. ಹೀಗೆ ಒಂದು ವ್ಯಕ್ತಿಯೇ ಆಗಲಿ, ಸಮಾಜವೇ ಆಗಲಿ, ರಾಜ್ಯವೇ ಆಗಲಿ, ಸಾಮ್ರಾಜ್ಯವೇ ಆಗಲಿ, ಮತವಾಗಲಿ, ಪಂಥವಾಗಲಿ—ಈ ಕಲ್ಲಿನ ಕಥೆಗೆ ಸೋಗೊಡುತ್ತವೆ. ವಿರಸಕ್ಕೆ ನಿಲುಕದ ರಸಲೋಕದಲ್ಲಿ ಜೀವಗಳ ಸಮರಸ ಜೀವನ ನೆಲೆಗೊಂಡು ಊರ್ಧ್ವಮೂಲ, ಅಧಃಶಾಖೆಯೆಂಬಂತೆ ಎಲ್ಲೆಲ್ಲೂ ಪಸರಿಸಬೇಕಾಗಿದೆ. ಆದರೆ ಈಶ ಸಂಕಲ್ಪದಂತೆ ಕಲ್ಲಾಗಿ ಜನ... ಮೂರ್ತಿಯಾಗಿ ಬೆಳೆದು, ಮತ್ತೆ ಕಲ್ಲಾಗಿ ಉಳಿದ ಕೀರ್ತಿಶೇಷ ಮೂರ್ತಿ ಜೀವನದಲ್ಲಿ ಮೃತ್ಯುವನ್ನು ದಾಟಿದ ಅಮರತೆಯಿದೆ. ರಸ ಸಾರುತ್ತಿರುವ ಸಂದೇಶ ಇದು. ಉಳಿದುದೆಲ್ಲ ಮರ್ತ್ಯ, ವಾಚ್ಯ, ಇದು ಧ್ವನಿ, ಇದು ಅಮೃತ, ಇದು ರಸ.

ಹೇಳಬಹುದಾದುದನ್ನು ಹೇಳಿಯಾಯಿತು. ಇನ್ನುಳಿದುದು ಸಹೃದಯ ಹೃದಯ ನಿಕಷದಲ್ಲಿ ಬಣ್ಣದೋರಬೇಕು. ಕಾಲದಲ್ಲಿ ತೇಲಬೇಕು. ಅದು ನಿಜವಾದ ಪರೀಕ್ಷೆ. ತೇಜವೆಷ್ಟೊ ಬೂದಿಯೆಷ್ಟೊ ಯಜ್ಞದಲ್ಲಿ ತಿಳಿಯಬೇಕು.

ಸೊಲ್ಲಾಪುರ,
೧೯೪೦.

ದ. ರಾ. ಬೇಂದ್ರೆ

ಮೂರ್ತಿ

ಪರಿವಿಡಿ

ಪ್ರಳಯ-ಸೃಷ್ಟಿ

ಹೊಗೆಮೋಡ ಹಿಂಜಿ, ಕಣ್ಮರೆಯಾಗುವಂತೆ, ನೆನೆ-
ಸಿದ ರೂಪ ಹುಡಿಯಾಗುತಿದೆ; ಮಬ್ಬು ಕವಿದು ಬರು-
ತಿದೆ; ಸ್ವಪ್ನಲೋಕದೊಳು ಆಕಾರ ಪ್ರಳಯವಿರು-
ವಂತೆ, ತುಂಬಿದೆ ನಿರಾಕಾರ ತಮ. ಚಿತ್ತಘನ
ನಿಬಿಡವನ; ಹೊತ್ತು ಗೊತ್ತಿಲ್ಲ; ಮಿಸುಗುಡದೆ ಮನ
ತನ್ನ ನುಂಗಿದೆ ತಾನು, ಯಾವ ಲೋಕವೊ ಇದಿರು ?
ಸೃಷ್ಟಿಯಿಲ್ಲದ ದೃಷ್ಟಿ, ಚಿತ್ರ ! ನಿಶ್ಚಿತ್ರ. ಇರು
ವೆನೊ ನಾನು ? ಇಹುದೇನು ? ಬರಿಬಯಲನಿರ್ವಚನ !

ಮರಣ ಮೂರ್ಛಿತ ದೇಹಕುಸಿರು ಹುಟ್ಟಿದ ಹಾಗೆ
ಸ್ಪಂದಿಸುವದಿದೊ ತಮವು; ದಿವ್ಯಶಾಲಗ್ರಾಮ
ಶಿಲೆಯೊಳುದಿಸಿದ ಕೊಳಲ ಕೃಷ್ಣಮೂರ್ತಿಯ ಮಧುರ
ಮುರಲಿನಾಪವು ಕಣದಗಣ ಕುಣಿಸುತಿದೆ ಸೋಗೆ
ನವಿಲಂತೆ, ಸುತ್ತು ಕಣ್ಣೋ ಕಣ್ಣು ! ಚಿರವಿಧುರ
ಪೂರ್ವವಧು ಪಡೆದಂತೆ, ಮನವೆ ಮಂಗಲಧಾಮ

ಮೂರ್ತಿ

ನಿ ವೇ ದ ನ

ತಾಯಿಯ ಮತ್ತು ಗೆಳೆಯರ

ಹೃದಯವೇದಿಕೆಯಲ್ಲಿ

ಮೂರ್ತಿ

ಅಚಿಂತ್ಯ

೧

ನಿಜವ ಕಂಡವರಿಲ್ಲ,
ನಿಜ ಕಾಣುವಂತಿಲ್ಲ,
ನಿಜವೇನು ಮಳಲ ಹುಡಿಗಿಂತ ಕೀಳೇ ?
ನಿಜವ ಕಂಡಿಹೆನೆಂಬ
ಕಣ್ಣ ಜಂಭದ ಹುಂಬ !
ಮಳಲ ಹುಡಿ ಗುಟ್ಟೇನು ಕಣ್ಣ ಕೂಳೇ ?

೨

ಕಣ್ಣ ಕದಿರಿನ ಕೈಯ
ನಿಲುಕದಾಚೆಯ ಮೈಯ
ನಿಜಕೆ ತಕ್ಕೈಯಬಿದ್ದ ಮಾತಮಲ್ಲ !
ನಿಜದ ನೆಲೆ ನಿಜಕಿಲ್ಲ—
ಇದನು ಬಲ್ಲವ ಬಲ್ಲ,
ಅದರ ತಿರುಳನೆ ತಿಂದೆಯೆಂಬೆಯಲ್ಲ !

೩

ಮಳಲಹುಡಿಯೊಂದು ಹಿಡಿ
ನಿನ್ನ ಹಿಡಿಯಲ್ಲಿ ಹಿಡಿ,
ಅದರ ಕತೆಯೇನು? ಗತಿಯೇನು? ಬಾಳು?
ಯಾವ ತ್ರೇತಾಯುಗದ
ಹಾಳಾದ ಹಳೆಜಗದ
ತಳಕು ಬೆಳಕಿಲ್ಲಿ ಮುಡಿದಿಹುದು ಹೇಳು!

೪

ಹರಿ ಮೇಲು, ಹರ ಮೇಲು,
ಬರಿಯ ಬರಹದ ಸಾಲು,
ಕಾಗುಣಿತ ತಿದ್ದಿಡಲು–ಬಳ್ಳಿ ಬದುಕೇ?
ಎರಡೆಂದು–ಅದು ಒಂದು,
ಎರಡೊಂದು ಎಂದೆಂದು,
ಅಂಕಿಮಗ್ಗಿಯ ಕುಣಿತ ಬೇಕೆ ಇದಕೆ?

೫

ಕಂಡಕಂಡಹಾಗೆ ನವ್ಯಭವ್ಯದಿವ್ಯವಾಗಿ ತೆರೆವೆ
ಓ ಅದೃಷ್ಟ ಓ ಅದೃಷ್ಟ ಓ ಅದೃಷ್ಟವೇ!
ಅಮೃತಜೀವಕೆಡೆಯ ಕೊಡುವನಂತಶಾಂತ ಜೀವಕಾಂತ!
ಓ ಅಚಿಂತ್ಯ ಓ ಅಚಿಂತ್ಯ ಓ ಅಚಿಂತ್ಯವೇ!

ಓಂ ಸ್ವಸ್ತಿ

ಬಾಳು

ನೆಲದ ಹೊಟ್ಟೆ ಬದುಕ ನೋಡು—
ಗಟ್ಟಿಗಲ್ಲು ಹಿಟ್ಟುಮಟ್ಟಿ
ಪದರು ಗುಂಡು ದುಂಡಿ ಬಂಡೆ,
ಮಟ್ಟಿಮಣ್ಣು ವಿವಿಧ ಬಣ್ಣ
ಮಣಿಯಮಣಿಯ ಕಣಿಯಕಣಿಯ
ಗುಡ್ಡ ಮೊರಡಿ ಒಡ್ಡು ಸಾಲು.

ಧರೆಯ ವಸುಂಧರೆಯ ಬದುಕ
ನೋಡು–ಹಳ್ಳಹೊಳೆಯ, ಝರಿಯ
ಹರಿಯ ಸೆಳವು ಹೊಳಪು ಹೊಳವು
ನುಣುಪು ರೂಪುಗೊಡುತಲಿಹುದು.

ಕಲ್ಲಮೈಯ ಮಿರುಗು ಬೆರಗು
ತಾಯಿನೆಲದ ಮೊಲೆಯ ಜಲದ,
ತಾಳಿಕೊಳುವ ಎದೆಯ ಹದದ

ನೋವ ಕಾವ ಬೆಂಕಿಯುರಿಯ
ನುಂಗಿ ನೀರು ಕುಡಿದು, ನೊಂದು
ಬೆಂದು ಕರಗಿ ಅರಗಿ ಮಿನುಗಿ
ಮಿಣುಕಿ ಮಿಂಚಿ ಹೊಗರು ಹೊಮ್ಮಿ

ಗಾಳಿಯುಂಡು ಬಲಿತು ಬಳೆದು
ಗಟ್ಟಿಗೊಂಡ ಗಂಡುಪಿಂಡ
ಬುವಿಯ ಬಸುರಿನಲ್ಲಿ ಬಂದು
ಮನೆಗೆ ಗುಡಿಗೆ ಮೈಯಕೊಟ್ಟು

ಹೆಣ್ಣಿಗೊಂದು ಬೆಡಗನಿಟ್ಟು
ಕಣ್ಣಿಗೊಂದು ಗೊಂಬೆಯಾಗಿ
ಸಿಂಗರಿಸಿತು ಬಯಲನು—
ನೋಡು ಕಲ್ಲನೆಲೆಯನು!

ಅರಸು ಕನಸು

ಅರಸು ಮನಸು—ಅರಸು ಕನಸು ;
ದಿನದ ಜನದ ಮನದ ಬಿನದ
ಹಿಗ್ಗಿ ಸುಗ್ಗಿ ಹರುಹಿ, ಅವರ
ನಲಿವಿನೊಲವ್ಮೆ ಬನದ ಪಿಕದ
ಕುಕಿಲು ದಿಸೆಯ ಮುಟ್ಟಿ ತಡಹಿ
ಜಗದ ಮೊಗದ ಮೊಗ್ಗೆ ಹೂತು
ನೆಲವೆ ಅರಸುತೋಟವಾಗಿ
ಮೆರೆಯಬೇಕು.—ನೂರು ಕೈಯ
ಚಳಕ ಕುಸುರು ಹಸಿರುಮುರಿವ
ಬಳ್ಳಿವಳ್ಳಿಯಾಗಿ ಹಬ್ಬಿ
ಕೋಟಿ ಕಣ್ಣ ಕಣವು ಕಟ್ಟಿ
ಗುಡಿಯು ಹುಟ್ಟಿ, ಅದರ ಕಳಸ
ಮುಗಿಲ ಮುಟ್ಟಿ ಮೆರೆಯಬೇಕು.—
ಅದರ ಗರ್ಭದಲ್ಲಿ ಚೆಲುವ
ಬಿಂಬವೊಂದು ನೆಲಿಸಿ ನಿಂತು

ಮಳೆಯು ಮಾಗಿ ಚಳಿಯು ಆಗಿ
ಅದುವು ಚಳಿತು ಸುಗ್ಗಿ ಚಿಗಿತು
ಬಿಸಿಲ ಹೂವು ಅರಳಿ, ಮರಳಿ
ಹಗಲು ಇರುಳು ಮಗ್ಗಲಾಗಿ
ಹೊತ್ತು ಹೊರಳಿ ಉರುಳುತಿರಲು

ಚಿಕ್ಕೆಗಣ್ಣ ಮುಚ್ಚಿ ತೆರೆದು
ಕದ್ದು ಮುಚ್ಚಿ ನೋಡುತಿರಲು—
ಈ ಬಿಂಬ ಸೊಬಗು ಎಂಬ
ತನ್ನ ಆ ವಿಶಾಲ ಜಾಲ
ದಲ್ಲಿ ಹಾರಜೀವ ಹಕ್ಕಿ
ಹಿಡಿದು ಸಾಕಿ ಮುದ್ದನುಣಿಸಿ
ಮೆಚ್ಚುಕುಡಿಸಿ ನಚ್ಚುಮಾತ
ಕಲಿಸಿ, ಕುಣಿಸಿ, ದಣಿಸಿ, ತಣಿಸಿ,
ಮತ್ತೆ ಹತ್ತು ದಿಕ್ಕ ತೋರಿ
ದಾರಿ ಕಂಡ ಕಡೆಗೆ ಹಾರಿ
ಹೋಗಿರೆಂದು ಹಾರಬಿಡಲಿ.

ಮನುವ ಮನವು ಹರುಷಪಡಲಿ—
ಎಂಬ ಬಯಕೆ ತುಂಬುಗೊಂಡು,
ಆಸೆ ಬಲಿತು, ಕನಸ ಕಲೆತು,
ಅರಸು-ಮನಸನೊಲಿಸಿತು
ಜೀವನದಲಿ ನೆಲೆಸಿತು.

ಶಿಲ್ಪಿ

ಅರಸನಾಜ್ಞೆ ತಲೆಯಲಿರಿಸಿ
ಶಿಲ್ಪಿ ತಂದೆ ಕಲ್ಲನರಸಿ.

ಜನ್ಮ ಸಫಲವಾಗುವಂಥ-
ಪೂರ್ವ ನಿಮಿಷ ಬಂದಿತೆಂದು
ಭಾವ ಜೀವವನ್ನು ತುಂಬಿ
ಸೂಸಿ ಹರಿಯುವಂತೆ ಕಣ್ಣ
ಕೋಡಿ ಹರಿಯೆ, ಮೈಯು ಪುಲಕ
ಪುಲಕವಾಗೆ,........

ಶಿಲ್ಪಿ ತನ್ನ ಕಲ್ಲಿನಲ್ಲಿ
ಜೀವರೂಪ ಹಡೆಯಲೆಂದು
ಆಣಿಗೊಳಿಸಿದನುಳಿಯನು........ ೧

ಉಳಿಯು ಕಲ್ಲನೂಳುತಿತ್ತು,
ಒಡನೆ ಬೀಜ ಬೀಳುತಿತ್ತು,
ಮೊಳಕೆ ಒಡನೆ ಮೂಡುತಿತ್ತು.

ಇಂದ್ರಜಾಲದಿಂದ ಹುಟ್ಟಿ
ಬಂದ ಬಂದ ಮಾವು ಎನಿತು
ಚೆಂದ! ಏನು ಚೆಂದ! ಸಫಲ
ವಾಗುವಂತೆ ಬೆಳೆಯುತಿತ್ತು. ೨

ತಾನು ಕಂಡ ಚೆಲುವ ಚೆಲುವು
ತಾನೆ ರೂಪರೂಪವಾಗಿ
ಮನದ ನಯನ ನಲಿಯುತಿತ್ತು.
ತಾತ ತನ್ನ ತನಯನನ್ನೆ
ಕದ್ದು ಕಂಡು ' ಏನು ಮುದ್ದು !'
ಎಂದು ತಣಿದುಕೊಂಡಹಾಗೆ—
ನೆನೆದ ನೆನೆದ ಕಾವಿನಿಂದ
ಮನದ ಮಯಣ ನೀರು ಹೊಂದಿ
ಚಿತ್ತದಲ್ಲಿ ಮುದ್ರಿಸಿದ್ದ
ಅಚ್ಚಿನಲ್ಲಿ ಎರಕಹೊಯ್ದು
ಚಿತ್ತಜನ್ಮನಾದನಂಗ
ಅಂಗವನ್ನು ಪಡೆದಭಂಗ
ಭಂಗಿಯಲ್ಲಿ ನಿಂತಹಾಗೆ
ಅತಿ ವಿಚಿತ್ರವಾದ ಚಿತ್ರ
ಮೈ ತಾಳಿ ಬಂದಿತು........ ೩

ಬಿಸಿಲು ಬೇಗೆಯಿಂದ ಬೆಂದ
ನೆಲವ ಹಣಿಸಿ ತಣಿಸಲೆಂದು
ಮರುಗಿ ವೃಷ್ಟಿಗಾಗಿ ಎರಗಿ
ಬಂದ ನೀಲಮೇಘ ಮಿಂಚಿ-
ನಿಂದ ಮೆರಗಿ ತೋರುವಂದ

ಶಿಲ್ಪಿ ತಾನು ಕಂಡ ಕೃಪಾ-
ದೃಷ್ಟಿಯನ್ನು ಕಂಡರಿಸಿದ,

ಕಂಡರಿಸಿದ, ಕಂಡರಿಸಿದ,—
ಕಂಡಹಾಗೆ ನಡುಗಿ ನಡುಗಿ,
ಬೆವತು, ಬಣ್ಣಗೆಟ್ಟು, ಜೀವ–
ರಸವ ಹಿಂಡಿದಂತೆ ಕಣ್ಣು
ಕರೆಯೆ, ಮಾತು ಬರದೆ, ಬಾಯಿ
ಬಿಟ್ಟು, ಕಣ್ಣುಬಿಟ್ಟು, ಮೈಯ
ಬಿಟ್ಟು, ಪ್ರಾಣಬಿಟ್ಟು, ಹಾರಿ–
ತೇನೊ, ಆರಿತೇನೊ ಜೀವ—
ಎಂಬ ಹಾಗೆ, ನಿಂತ ಹಾಗೆ
ಶಿಲ್ಪಿ ದೇಹವಿಟ್ಟನು........ ೪

ಮೂರ್ತಿ

ಹಾಸದೊಂದು ಹಸೆಯ ಮೇಲೆ
ರಾಸಲೀಲೆ ಎಸೆಯುವಂತೆ,
ಹಲವರೊಲವಿಗಾಗಿ, ಕೆಲಕೆ,
ಬಲಕೆ ಎಡಕೆ, ಒಲೆದ ಒಂದೆ
ಮೊಗವೆ–ಸೊಗವೆ ಸಾವಿರಾರು
ಭಾವಗಳನು ನಟಿಸುವಂತೆ,—
ಸುತ್ತು ನೆರೆದ ರಮಣಿಮಣಿಯ
ರೊಂದಿ ಸಮೆದ ಮಾಲೆಯಲ್ಲಿ
ಮೆರೆವ ಹೃದಯಪದಕದಂತೆ,—
ಮಿಂಚಿನಿಂದ ಬರೆದ ರಂಗ
ವಲ್ಲಿ ಸುಳುಹಿನಲ್ಲಿ ಹುದುಗಿ
ಹೊಳೆವ ರಂಗನೊಂದು ಪಾಂಗಿ
ನಂತೆ ಮೆರೆಯುತಿಹುದು ರೂಪ.

ಮುಖದ ಸುಖವ ಬಣ್ಣಿಸುವರೆ
ಇದರ ಸಮ್ಮುಖಕ್ಕೆ ನಿಂತು
ಇದನು ಓತು ನೋಡಬೇಕು ;
ನಂದನಕ್ಕೆ ನಗೆಯ ಮೇಲು
ಸಾಲು ತೋರುವಂತೆ ದಂತ
ಪಂಕ್ತಿ ತೋರದಂತೆ ಅಧರ
ದಲ್ಲಿ ಮೆರೆವ ಮಧುರ ಹಾಸ;
ಬೆಟ್ಟವದಿರಬಹುದು ಇದರ

ಬೊಟ್ಟು ಅಳುಕಲರಿಯದೆಂಬ
ತೆರದ ನಿಲುವು–ಭೂಮಿದೇವಿ
ಗೊಂದು ಮುದ್ದುಕೊಡುವ ಹಾಗೆ
ಎಸಕದಿಂದ, ಮೋಹಪಾಶ
ವನ್ನು ಸುತ್ತಲೆಸೆಯುತಿತ್ತು;
ಅಡಿಯ ಕೀಳದಿದ್ದರೇನು ?
ಇದುವೆ ಬಂದೆ ಇಗೋ ಬಂದೆ
ಎಂಬ ತವಕದಿಂದ ತುಂಬಿ
ತುಳುಕುವಂಥ ಮೈಯ ಮಾಟ,
ಹಸಿದು ಬಂದ ಜನಕೆ ಇಸಿದು
ಕೊಳ್ಳಿ, ಕೊಳ್ಳಿ ಒಸೆದ ವರವ
ಎನ್ನುವಂತೆ ನೀಡಿದಂಥ
ವರದ ಹಸ್ತ, ಬೆರಗು ಬೇಡ
ಎನ್ನುವಂಥ ಅಭಯಹಸ್ತ
ಮೂರ್ತಿಗಿರುವ ಒಡವೆ ವಸ್ತ್ರ.

ನೋಡಲಾಗಿ, ಒಂದು ಕಲ್ಲು—
ಓಜನೊಳಗೆ ಸುಳಿದ ತೇಜ
ಕಳೆಯ ರೂಪದಲ್ಲಿ ಮೂಡಿ
ಜೀವಪಡೆದ ಬಿಂಬವನ್ನು
ಇಲ್ಲಿ ಒಡಲ ಪಡೆದು, ಹಡೆದು,
ಮತ್ತೆ ಕಂಡ ಕಣ್ಣ ದಾಟಿ
ಮನದೆ ನಾಟಿ ಸಿಂತಿತು.

ಕೀರ್ತಿ

ಗಣನೆಯಿಲ್ಲದನಿತು ಜನವು
ಇದರ ರೂಪ ಗುಣಕೆ ಸೋತು
ಭಕ್ತರಾಗಿ, ಹೃದಯದಲ್ಲಿ
ಮತ್ತೆ ಇದನು ಎತ್ತಿ ಇಟ್ಟು,
ಮುಕ್ತರಾದರಿಲ್ಲಿ. ಕೆಲರು
ಮುಕ್ತಕಂಠದಿಂದ ಕೊಂಡು
ಕೊನೆದು ಅದನೆ ನೆನೆದು ರಸಸ-
ರಸ್ಸಿನಲ್ಲಿ ನಾಂದು ಸದಯ
ರಾದರಿಲ್ಲಿ. ಹಲರು ತಮ್ಮ
ನೆಲೆಯ ದೊರೆಯದೆದೆಯ ಒಲುಮೆ
ತೊಲೆಗೆ ಇಡುವ ಹಾಗೆ, ಬೆಲೆಯ
ಕಟ್ಟಬರದ ಭೂಷಣಗಳ—
ನಿಟ್ಟು ದೇವಪಾದದಲ್ಲಿ
ಬಿಟ್ಟು ತಮ್ಮ ಹಮ್ಮು ಬಿಮ್ಮು
ಇದರ ಅಡಿಯ ಹುಡಿಗೆ ನೋಂತು,
ಅದನೆ ತೊಡಿಗೆಯಾಗಿ ಆಂತು,
ನುಡಿಗು ನುಡಿಗು 'ಚೆನ್ನ, ಚೆನ್ನ'
ಎಂದು, ಹೊಟ್ಟೆ ಮಕ್ಕಳನ್ನು
ಇದರ ಹೆಸರಿನಿಂದ ಹರಸಿ
ಹರುಷಗೊಳ್ಳುತಿರೆ, ಅನಿಬರು

ಸೊಗವು ಇರಲಿ ದುಗುಡ ಬರಲಿ
‘ ಚೆನ್ನ ನಿನ್ನದದುವು ’ ಎನುವ
ಅನುವ ಕಂಡುಕೊಂಡು, ಶಾಂತಿ-
ತೀರ್ಥದಲ್ಲಿ ಮಿಂದರು ;
ಅಚಲವಾದ ನಚ್ಚು ಮೆಚ್ಚು-
ಗೆಯಲಿ ಅವರು ನಿಂದರು.

ಮುಪ್ಪು

ಮೂರ್ತಿಗಿಂತ ಪೂಜೆಯವರ
ಕೀರ್ತಿ ಮೇಲುಗೈಯು ಬರಬ–
ರುತ್ತ; ' ಹೊನ್ನು-ಮಣ್ಣು ' ಎಂದು
ಜಪಿಸಿ ಜಪಿಸಿ ಮಣ್ಣಿನಷ್ಟು
ಹೊನ್ನ ಪಡೆದು, ಇನ್ನು ಬೇರೆ
ಚಿಂತೆ ತೊರೆದು, ದೇವರನ್ನು
ಹೊನ್ನಿನಲ್ಲಿ ಹುಗಿದು ಹೂಳಿ,
ಇವನ ಪೀಠವನ್ನು ತಾವೆ
ಏರಿ; ಬರುವ ಕಪ್ಪಕಾಣಿ
ಕೆಗಳ ತಮ್ಮ ದಕ್ಷಿಣೆಯನು
ಕಾಣುವಂತೆ ಕಂಡು, ತಮ್ಮ
ಮಂದಹಾಸ–ದೇವಕೃಪೆಯ
ಚಂದ್ರಕಲೆಯ–ಉದಿತೋದಿತ
ಕೀರ್ತಿ ಮುಖದ ಹಾಗೆ ಮೆರಸಿ,
ದುಃಖಿಗಳನು ದೂರವಿರಿಸಿ,
ಪಾಪಿಗಳನು ಹೇಳಿ ಕರೆಸಿ-

ವಾರವನಿತೆಯರ ವಿಲಾಸ
ಭವನದೊಂದು ಒಪ್ಪ ಗುಡಿಗೆ
ಹಾಕಿ, (ಕಳಸವಿಡಲೊ ಏನೊ !)
ಪಾಡ ತೋಡಿಕೊಳುವ ಹಾಡ

ಮೊಳಕೆ ಮೂಡದಂತೆ ಮಾಡಿ
ತಮ್ಮ ದನಿಯ ಸಡಗರವನು
ಬೆಡಗಿನಿಂದ ಸಾರಿ, ಬೀರ
ಬರುವ ಗಾಯಕಿಯರ ಮೇಳ
ಆಸೆಗಣ್ಣ ಸಂತೆಗೀಸು
ಈಸು ಚೆಲುವ ಹಂಚುವಂತೆ
ಸೆರಗನತ್ತಲಿತ್ತ ಸರಿಸಿ,
ತೋಳು ಕೆಳಗೆ ಮೇಲೆ ಮಾಡಿ,
ಚಿನ್ನನಿಂದ ಜನರ ಮೊಗವ
ತಮ್ಮ ಕಡೆಗೆ ತಿರುಗಿಸುತ್ತ
ಕುಣಿಯುತಿಹುದು–ಕುಣಿಸುತಿಹುದು.

ಬೆಲೆಯ ತುಲೆಯ ತಳಿಗೆಯಲ್ಲಿ
ಎಡೆ–ಪ್ರಸಾದ ತೂಗುತಿಹುದು.
ಪೂಜೆಯನ್ನು ಹೊಂದತಕ್ಕ
ಪೂಜ್ಯ ವಸ್ತು ಶೂನ್ಯವಾಗಿ
ಕಣ್ಗೆ ಮಾಯವಾಯಿತು.

ಮುಕ್ತಿ

ಮೂರ್ತಿಗಿಂತ ಮುಂದೆ ಇದರ
ಹೊನ್ನ ಕೀರ್ತಿ ಹಬ್ಬಿ, ಸುಲಿಗೆ
ಯವರ ಸೆಳೆಯುತಿತ್ತು; ಅಲಂ
ಕಾರ ಭಾರವನ್ನು ಹೊರುವ
ವಸ್ತುವಾಯ್ತು ಮೂರ್ತಿ; ಚಿನ್ನ
ದೆಷ್ಟೊ ತತ್ತಿಯಿಡುವ ಹಕ್ಕಿ
ಕಾಯುವಂತೆ ಕಾಯುತಿದ್ದ
ರಿದನು ಒಡೆಯರಾಗಿ: ಇದನು
ಕೇಳಿ ಕೇಳಿ ಕೊಡತಿಯೊಡೆಯು
ಬಂದನೊಬ್ಬ ಹೊನ್ನು ಪಡೆಯ
ಲೆಂದು, ಮೂರ್ತಿ ಒಡೆಯಲೆಂದು.

ಚಿನ್ನ! ನಿನ್ನದೇನು ಇಲ್ಲಿ?
ಪೂಜಕರದೆ ನೀನು ಸೊತ್ತು.
ಅರಸಕಂಡ ಭವ್ಯಸ್ವಪ್ನ,
ಶಿಲ್ಪಿ ಹಡೆದ ದಿವ್ಯದೇಹ,
ಭಕ್ತರಿತ್ತ ಭಕ್ತಿವಿಭವ,
ಎಲ್ಲ ಮಣ್ಣುಗೂಡಿತಿಲ್ಲಿ.

ಪೂಜೆ ಮಾಡುವವರ ಪ್ರಾಣ
ಹೊನ್ನು, ಹೊನ್ನು, ಇನ್ನೂನು........
ಗುಡಿಯನಾಳುವವರ ಪ್ರಾಣ
ಹೊನ್ನು, ಹೊನ್ನು, ಇನ್ನೂನೂ........

ಕೊಡತಿಯೊಡೆಯ ! ಹೊನ್ನ ಸೆರೆಯ
ಬಿಡಿಸಬಾರೊ ಮೂರ್ತಿಗೆ.
ಮುಕ್ತ ಶಿಲೆಯು ಇರಲಿ ನೆಲೆಯು
ನಾಮಶೇಷಕೀರ್ತಿಗೆ !

ಕೊನೆಯ ಹಾಡು

೧

ನನ್ನ ಹರಣ
ನಿನಗೆ ಶರಣ
ಸಕಲ ಕಾರ್ಯಕಾರಣಾ
ನಿನ್ನ ಮನನ
ದಿಂದ ತನನ
ವೆನುತಿದೆ ತನು ಪಾವನಾ !

೨

ಸುಖದ ಮಿಷವು
ದುಃಖವಿಷವು
ಹಿಗ್ಗಿ, ಪ್ರಾಣ ಪೂರಣಾ !
ಪಂಚಕರಣ
ಗಳೀ ಗಡಣ
ಕಟ್ಟಿತು ಗುಡಿ ತೋರಣಾ.

೩

ನಿನ್ನ ಚರಣ
ಸುಸಂತರಣ
ಜಗದ್ಭರಿತ ಭಾವನಾ !
ಹಾಸ್ಯಕಿರಣ
ತದನುಸರಣ
ತದಿತರ ಪಥ ಕಾಣೆ ನಾ.

ಹರುಷರಸವೆ,
ಕರುಣದಸುವೆ,
ಜೀವ–ಧರ್ಮ–ಧಾರಣಾ;
ರಸವೆ ಜನನ
ವಿರಸ ಮರಣ
ಸಮರಸವೇ ಜೀವನಾ!

ಗಾರುಡಿಗ

ಇದು ಮಂತ್ರ; ಅರ್ಥಕೊಗ್ಗದ ಶಬ್ದಗಳ ಪವಣಿಸುವ ತಂತ್ರ;
ತಾನೆ ತಾನೆ ಸಮರ್ಥಛಂದ; ದೃಗ್ಬಂಧ ದಿ-
ಗ್ಬಂಧ; ಪ್ರಾಣದ ಕೆಚ್ಚು ಕೆತ್ತಿ ರಚಿಸಿದೆ; ಉಸಿರ
ಹೆಡೆಗೆ ಹೂಡಿದ ಗರಿಯು ಗುರಿಯು ನಿರಿಯಿಟ್ಟು ಬರು-
ತಿದೆ ತೂರಿ ಲೀಲೆಯಲನಾಯಾಸ.   ಗರುಡನಂ-
ತೆರಗಿ ಬಂದಿತು—ಭ್ರಮೆಯೊ? ಹಮ್ಮಿದವೊ? ಸಂಜೊ? ಮರ-
ಣವೊ? ನಿದ್ದೆಯೊ! ಮೋಹನವೊ! ಎಚ್ಚರಕೆ ಕವಿದ
ಮರೆವೊ! ಕನಸೋ ನನಸು—ಎಲ್ಲ ಹಾಲೋಹಾಲು!
  ಎಲೆಹಾವೆ! ಹೊಟ್ಟೆಹೊಸೆಯುವ ಜಂತು! ನಿನಗೆ ಕಿವಿ-
  ಯಿಲ್ಲ, ನಾಲಿಗೆಯೆರಡು, ಹಲ್ಲೊಳಿದೆ ವಿಷವು, ನಿ-
  ನ್ನನ್ನ ಗಾಳಿಯು, ನೀನು ಪಾತಾಳಕಿಳಿದರೂ
  ಮತ್ತೆ ಕಾಡುವೆ. ರಸಿಕನೆನೆ ಚೆಂದ ತಲೆದೂಗಿ
  ನಾಳೆ ಕಾರುವೆ ಗರಳ! ಬಯಸುತಿರು, ಬಯಸುತಿರು....
  ಕಂಡಿಲ್ಲವೇನೊ ಅಂಗೈಯ ಗರುಡನ ಗೆರೆಯ!

‘ ಕಾಮಕಸ್ತೂರಿ ’

(ಒಂದು ಪ್ರಣಯಪ್ರಣಾಲಿಯಲಹರಿಲಹರಿ)

ಹೇಳಬೇಕಾದ ಮಾತು

ಮುಂದಿನ ೧೫–೧೬ ಕವನಗಳು ಒಂದೇ ಕಾಲಕ್ಕೆ ಬರೆದುವಲ್ಲ. ಒಂದೇ ತರಂಗಲಹರಿಯಲ್ಲಿ ಬರುವ ಜಾತಿಯವು. ರಸಿಕರು ಕಲ್ಪನೆಯಿಂದ ಅದರ ಸುತ್ತು ಕತೆ ಕಟ್ಟಬಹುದು—ಅವರವರಿಗೆ ರುಚಿಸುವಂತೆ. ಕಾಮವೂ ಕಸ್ತೂರಿಯಂತೆ ಒಕ್ಕಾಲು ಮದ, ಮುಕ್ಕಾಲು ಮಣ್ಣು ಆದರೂ ಮಗಮಗಿಸುವ ಸವಿಗಂಪು. ಕಾಮ-ಪ್ರೇಮ ಕೆಸರು-ಕಮಲ ಇದ್ದಂತೆ. ಒಂದು ವಾಚ್ಯ ಒಂದು ಧ್ವನಿ-ಕಾವ್ಯದ ಭಾಷೆಯಲ್ಲಿ.

ಇವೆಷ್ಟೋ ಏಕತಾರಿಯ ಜೊತೆಗೆ ಹೇಳಬೇಕಾದುವು. ಇವು ಅನುಭಾವ ಪದಗಳಲ್ಲ. ಈ ಅನುಭಾವ ಬೇರೆ. ಪ್ರಾಯದವರಿಗೆ ಹೇಳಬೇಕಾಗಿಲ್ಲ. ಪ್ರಾಯ ಮೀರಿದವರಿಗೆ ಹೊಸದೇನು ? ಎಲ್ಲರಿಗೂ ಒಂದಿಲ್ಲೊಂದು ರೀತಿಯಲ್ಲಿ ರುಚಿಸುವದೆಂದು ಆಶಿಸಿದ್ದೇನೆ.

—ದ. ರಾ. ಬೇಂದ್ರೆ

ಕಾಮುಕಸ್ತೂರಿ

ಪರಿವಿಡಿ

ಹರಕೆ

ಮಂದಗತಿ ಮಂದತರವಾಗಿ ಬಿಟ್ಟಿದೆ; ಹುಲ್ಲೆ-
ಗಂಗಳೊಲು ಚಂಚಲತೆ ಕುಡಿಯೊಡೆಯಲಿದೆ; ಉಡುಗಿ
ವೈನಯದ ಸೆಯ್ಗೆತೊಪ್ಪಲು; ಹರೆಯ ಚಿಗುರಡಗಿ
ನೆತ್ತರದ ನೆರೆಗೆಂಪು ಹಳಸುತಿದೆ ಭರದಲ್ಲೆ.

ಹಾರುಹಕ್ಕಿಯ ಪುಚ್ಛವೆಣಿಸಲೆಳಸಿದ ಬೆಡಗಿ!
ವಿಜಯವಿಠ್ಠಲನ ಗುಡಿ ಭಣಗುಡುವ ತೆರದಲ್ಲೆ
ಹರುಹಲಿರುವೆದೆ ಬರಿಜೊ ಬರಿದು; ಮಿದುಸವಿಸೊಲ್ಲೆ
ಹುಟ್ಟದಿದೆ; ಕೈನೀಡಿ ಬೆಳೆಮ ನಿಂತಿಯೆ ಹುಡುಗಿ.

ದಿನದ ದಣಿವನು ಕಳೆಯೆ ತಂಗಿ ಹಾರುವ ಹಕ್ಕಿ
ಎರಗದಿರಲಿಲ್ಲಿ. ಕಟ್ಟಾಡಿಸಲು ಬರದಿರಲಿ
ಹುಡುಗಗಾಳಿ. ಅನಾದಿವಂಶದಾ ವೈಭವೋ-
ದಯವ ಮೂಸಿಸಿ ಬಿಡುವ ತುಂಬಿ ಬರದಿರು. ನವನವೋ-
ನವ ಮನೋರಥ ಸಫಲ ಪೊಸ ಬಸಂತನೆ ಬರಲಿ.
ನಿನಗೆ ಕಾವಲವಿರಲಿ ನಿನ್ನ ಚಂದ್ರಮ-ಚಿಕ್ಕಿ.

ಪಾರಿನೋಟ

(ಹೋಳಿಯು ಮೇಲೆ)

ಪಾರಿನೋಟ ಹಾರತಿತ್ತೋ ಹೊಳಿವ್ಯಾಗ
ಹೊಸಾ ಹರಿ ಈಸತಿತ್ತೋ ಹೊಳಿಯಾಗ ||ಪಲ್ಲ||

೧

ಒಂದು ಬಳ್ಳಿ ಹೂಬಿಡಲಿತ್ತೋ ಹೊಳಿವ್ಯಾಗ
ಗಾಳಿಯೊಂದು ಸುಳಿದಾಡತಿತ್ತೋ ಹೊಳಿಯಾಗ

೨

ಸೂಜಿಗಲ್ಲು ತಿರುಗತಿತ್ತೋ ಹೊಳಿವ್ಯಾಗ
ಸೂಜಿಯೊಂದು ತೇಲತಿತ್ತೋ ಹೊಳಿಯಾಗ

೩

ಸೆರಗು ಒಂದು ಅಲೆದಾಡತಿತ್ತೊ ಹೋಳೀವ್ಯಾಗ
ಬೆರಗು ಒಂದು ನಲಿದಾಡತಿತ್ತೋ ಹೊಳಿಯಾಗ

೪

ತುಂಬಿಯೊಂದು ಹಾಡತಿತ್ತೋ ಹೊಳಿವ್ಯಾಗ
ತಾವರ್‍ಯೊಂದು ಬಾಯ್ಬಿಡತಿತ್ತೋ ಹೊಳಿಯಾಗ

ಕಾಮಕಸ್ತೂರಿ

(ಹೊಲದ ಹತ್ತರ)

ತಂದೇನಿ ನಿನಗೆಂದ
ತುಂಬಿ ತುರುಬಿನವಳ,
ಕಾಮಕಸ್ತೂರಿಯಾ
ತೆನಿಯೊಂದ.

ಅದನಽ ನೀ ಮುಡಿದಂದ
ಮುಡಿದಂಥ ಮುಡಿಯಿಂದ
ಗಾಳಿಯ ಸುಳಿಯೊಂದ
ಬಂದೆನಗ ತಗಲಿದಂದ
ತಣಿತಣಿತಣಿವಂದ
ಈ ಮನಕ.

ಅನ್ನೋ ಜನರು ಏನು
ಅಂತಽನ ಇರತಾರ
ಹೊರತಾದೆ ನೀ ಜನಕ.

ಬಡವರ ಮಗಳು

(ಹಾದಿಯಲ್ಲಿ)

ಬಡವರ ಮಗಳಾಗಿ ನೀನು
ಸಡಗರ ನಿನಗೆಷ್ಟು
ಬಡಿವಾರ ನಿನಗ್ಯಾಕ

ಬಿಸಿಲು ಹಬ್ಬಿ ಗಾಳಿಯು ಹರಡಿ
ಮುಗುಳು ನಗೀ ಅರಳಿಸಲೊಲ್ಲಿ
ಎವಿಯಿಕ್ಕದೆ ದಿಟ್ಟಿಸಿದರೂ
ಉಗುರದಿಟ್ಟ ಇಟ್ಟ ನಡೆದಿ

ಮಾವು ಚಿಗಿತು ಮಲ್ಲಿಗೆ ಹೂತು
ಸುಗ್ಗಿ ಬಂದು ಮಗ್ಗಿಯೆ ಇರುವಿ
ಕಣ್ಣುಮುಚ್ಚಿ ನಿನ್ನ ನೆನೆದೇ
ಎದೀ ಮುಗುಳು ತೆರೆಯಲೊಲ್ಲಿ

ಬಂಗಾರದ ಮಾಡದಿಂದ
ಸಿಂಗಾರದ ಮಳೆಗರಸೇನ
ಹ್ಯಾಂಗಾರ ಕಣ್ಣ ಸೆತ್ತಿ
ಒಮ್ಮೆ ನೋಡ ಒಮ್ಮೆ ನೋಡ.

ನನ್ನವಳು

(ನಸುಕಿನ ಝುಳುಕು)

೧

ತಂಬುಲದ ತುಟಿಯ ತೋರಿ
ಮಲ್ಲಿಗೆಯ ಮುಡಿದುಕೊಂಡು
ಮೆಲ್ಲಗಾಗಿ ಬರುವವಳ್ಯಾರs ?
ಸಂಜಿ ಏನs ?

೨

ಮೇಲಸೆರಗು ಮೆಲ್ಲಗ ಸರಿಸಿ
ವಾರಿನೋಟ ಮೇಲಕ್ಕೆತ್ತಿ
ಮಳ್ಳಿಯಂತೆ ಮುರುಕುವಳ್ಯಾರs ?
ಇರುಳು ಏನs ?

೩

ಆಲಿದುಗಿಲಿದು ಉಲಿದೂ ಉಲಿದೂ
ನೆಟ್ಟ ನೋಟಾ ಕೀಳಲಾರ್ದs
ತಣ್ಣಗಾಗಿ ನಿಂತವಳ್ಯಾರs ?
ನಸುಕು ಏನs ?

೪

ಹೊತ್ತೊತ್ತಿಗೆ ಹೊಂದಿಕೆಯಾಗಿ
ಹಲವಾದಿ ಒಬ್ಬಾಕೆಯಾಗಿ
ಹೌದ ಚನ್ನಿ ಹೌದs ಚೆಲುವೀ
ನನ್ನವಳೇನs ?

ಅವನು—ಅವಳು

(ಗುರುತು)

ಅವಳು :—ನೀನು ಹೊರಟಿರುವದೆತ್ತ ?
ಅವನು :—(ಬರಿ ಸನ್ನೆಯಿಂದ) ಇತ್ತ—
’ಳು :—ಈ ಹಾದಿ ಮುಗಿದುದೆಲ್ಲಿ ?
’ನು :—(ಬರಿ ಸನ್ನೆ) ಅಲ್ಲಿ—
’ಳು :—ಬುತ್ತಿ ಕೂಡಿಲ್ಲವಲ್ಲಾ ?
’ನು :—(ಬರಿ ಸನ್ನೆ) ಇಲ್ಲಾ—
’ಳು :—ಜೊತೆಗಿತೆಗೆ ಬೇಡವೇನು ?
’ನು :— ಏನು ?

ಅವನು :—ಗೊತ್ತುಗುರಿಯೇಕೆ ಬೇಕೋ ?
ಅವಳು :—(ಬರಿ ಸನ್ನೆ) ಏಕೋ !
’ನು :—ಬರುವೆಯಾ ನೆರಳ ಹಾಗೋ ?
’ಳು :—(ಬರಿ ಸನ್ನೆ) ಹೇಗೋ !
’ನು :—ನನ್ನೊಳನುರಾಗಿ ನೀನೋ ?
’ಳು :—(ಬರಿ ಸನ್ನೆ) ಏನೋ !
’ನು :—ನನಗೆ ಬೇಕಾದುದೇನೇ ?
’ಳು :—(ಬರಿ ಸನ್ನೆ) ನೀನೇ !

ಕತ್ತಲೋ ಕತ್ತಲು

(ಇಬ್ಬರಲ್ಲಿ)

ನಿಶೆಯಲ್ಲೊ ಎಲ್ಲೆಲ್ಲು । ರವಿಯಿಲ್ಲೊ ಶಶಿಯಿಲ್ಲ ॥
ತೇಜಗಳ ತುಣುತುಣುಕು । ಮಿಂಚುಹುಳ ಮಿಣುಮಿಣುಕು ॥
ಝುಳುಕುಯಿದೆ ತುಳುಕುತಿದೆ । ಥಳಕಿದ್ದು ಬೆಳಕಿಲ್ಲೋ ॥
ಕಣ್ಣಿನಾ ಹಡಗಲು । ಬೆಳಕನ್ನು ಪಡೆಯಲು ॥
ಹೊರಟಿಹುದು ಹುಡುಕಲು । ಯಾವ ನಡುಗಡ್ಡೆಯಲೊ ॥
ಆದರಾಚೆ ದಂಡೆಯಲೊ । ಕತ್ತಲಿನ ಕಡಲಲು ॥
ಎತ್ತಲೂ ಕತ್ತಲು । ಎಲ್ಲಿಹುದು ಬಡಗಲು ॥
ಮುಗಿಲಿನಲಿ ಮೋಡಗಳು ಕತ್ತಲೋ ಕತ್ತಲು ॥
ದೀಪದ ಬುಡದಲು । ಅಲ್ಲಿಯೇ ಹಡೆದೊಲು ॥
ಕಣ್ಣಿದ್ದು ಕಾಣದೊಲು । ಚಿಕ್ಕೆಗಳ ಸುತ್ತಲು ॥
ಮುಗಿಲಿನಾ ಮೊಗದಲು । ನಿದ್ದೆ ಹೋದವರೊಲು ॥
ಚಿಂತಿಸುವ ಚಿತ್ತದಲು । ಗುರಿಯಿರದ ಬಾಣದೊಲು ॥
ಎತ್ತಲೋ ಎತ್ತಲು । ಮುಂಗುರುಡ ಮನದೊಲು ॥
ಕತ್ತಲೋ ಕತ್ತಲು.

ಬರಿಗೊಡದ ಬಾಲಿ

(ಅಗಲಿಕೆ)

೧

ಬರಿಗೊಡದ ಬಾಲಿ ಕೊಡನ್ಯಾಕ ತುಂಬಿಲ್ಲ
ದಡದಾಗ ನಿಂತ್ಯೆ ಸುಮ್ಮನೆ ಕೋಲ
ದಡದಾಗ ನಿಂತ್ಯೆ ನಿನಗ್ಯಾಕೀ ಚಿಂತೆ
ಜನುಮಕ ಬಂದು ದಿನವೇಸ ಕೋಲ

೨

ತಪ್ಪಡಿ ತಪ್ಪೀಸಿ ತೊದಲಾಟ ಬಿಟ್ಟೊ
ಮೊಲಿಹಾಲ ಕುಡಿದು ದಿನವೇಸ ಕೋಲ
ಮೊಲಿಹಾಲ ಕುಡಿದು ದಿನವೇಸ ತಂಗೆವ್ವ
ಹುಡಿಯಾಟಾಡಿ ದಿನವೇಸ ಕೋಲ

೩

ಪಿಸಿಪಿಸಿ ನಕ್ಕು ಹುಸಿಹುಸಿ ನಾಚಿ
ಹುಡದೀಯ ಬಿಟ್ಟು ದಿನವೇಸ ಕೋಲ
ಹುಡದೀಯ ಬಿಟ್ಟು ಅಡಿಗಡಿ ಮುರಕದ
ನಡಿಗೀಯ ಹಿಡಿದು ದಿನವೇಸ ಕೋಲ

೪

ಬೆನ್ನೀಗೆ ಕೂದಲು ಬೀಸಾಗಿ ಕುಣಿದಾಡಿ
ಕೆನ್ನೀಗೆ ಕುರುಳು ಮುತ್ತಿಟ್ಟು ಕೋಲ
ಕೆನ್ನೀಗೆ ಕುರುಳು ಮುತ್ತಿಟ್ಟು ದಿನವೇಸು
ಹೆಡಮುಡಿ ಬಿಗಿದ ಹೆಳಲ್ಹಾಕಿ ಕೋಲ

೫

ದಿಟ್ಟನ್ನ ಮಾತಾಡಿ ದಿಟ್ಟೇಸಿ ನೋಡಿ
ದಿಟ್ಟಿಯ ತೆಗೆದು ದಿನವೇಸ ಕೋಲ
ದಿಟ್ಟಿಯ ತೆಗೆದು ದಿನವೇಸು
ದಟ್ಟಿಯ ಉಟ್ಟು ದಿಟ ಹೇಳ ಕೋಲ

೬

ಆಟದ ಗೊಂಬಿ ಮಗಳೆಂದು ನಂಬಿ
ಮಗ್ಗುಲದಾಗ ಮಲಗೀಸಿ ಕೋಲ
ಮಗ್ಗುಲದಾಗ ಮಲಗೀಸಿ ಮುದ್ದಿಟ್ಟು
ಹಿಗ್ಗಿಗ್ಗಿ ಕುಣಿದು ವರಸೇಸ ಕೋಲ

೭

ಕೆಲಬಲದಾಗ ಕುಣಿಕುಣಿವ ಕಣ್ಣು
ಎದಿ ಬದಿಬದಿಗೆ ಹುಡುಕಾಡಿ ಕೋಲ
ಎದಿ ಬದಿಬದಿಗೆ ಹುಡುಕಾಡಿ ದಣಿದು
ತಲೆಬಾಗಿ ಏಸು ತಿಂಗಳ ಕೋಲ

ನೀರಿಗೆ ನಡೆದಾಗ

೧

ನೀರಿಗೆ ನಡೆದಾಗ ನೀರಿಗಿ ಚಲ್ಲಾಟ
ನೀರೆ ನೀರಿಲೆ ಬರುವಾಗ ಕಣ್ಣೀರ
ನೀರು ಇಳಿದಾವೊ ಗಲ್ಲಕ್ಕ

೨

ನೀರಾಗ ನಿಂತಾಗ ನೆರಳ ನೋಡುವ ನಾರಿ
ಎರಳಿಗಂಗಳ ಎವೆ ನಿಲಿಸಿದೆಡಬಲದ
ಕಣ್ಣಾಗ ನಿನ್ನ ಕರಿಗೊಂಬಿ

೩

ಹರಿಯೊಂದು ಹರಿನೀರ ತಿರೆಯೊಂದು ಕರಿನೀರ
ಹರದಿ ನಿನ್ನೆದೆಯು ಮುನ್ನೀರ ಜನುಮಾವು
ಹರಿಗಡಿಯದಂಥ ಹೊಳೆನೀರ

೪

ತಾವರಿ ಹೂವಾಗಿ ಯಾವರಿಗರಳಿತ್ತೊ
ಆವರಿಗೆ ತುಂಬಿ ತುಂಬ್ಯಾವ ಬಾಡುತಲೆ
ತಾವ್ಯಾರೊ ಎಂದು ತೆರಳ್ಯಾವ

೫

ಹರಿವ ಗಂಗೀ ನೆರಿಗೆ ಹರಿಸೀದೆ ಕಣ್ಣೀರು
ಹರಹರ ಎಂದು ಹೊಳೆ ತೊರಿ ಮೊರೆದಾಗ
ಹರನೆ ಕಿವಿಗೊಡುವ ದುಃಖಕ್ಕ

ಅಕ್ಕರತಿ

ಗಳಗಳ ಗಾಳಿಯು ಜಳಜಳ ನೀರಾಗ
ಸುಳಿಸುಳಿದು ಬಂದು ನೀರಾಟ ಆಡುತಲೆ
ಒಲಿದೊಲಿದ ನೀರು ತೆರಿತೆರಿ

ಜಿನುಗುಮಿಾನದ ಜಾತ್ರಿ ಜರತಾರಿ ರೇಸಿಮಿ
ಜರಧ್ವಾಂಗಂಚೀಲೆ ನೆರೆದಾವ ಕರದರ
ಹರಿದು ನೀರಾಗ ಸರದಾವ

ಹುಳಹುಪ್ಪಡೆಂತಂದು ಹೀಗಳಿಗಳಿದಿಲ್ಲ
ಹೂವು ಹೂವಿನ ಬಟ್ಟಲ ಜೇನಿಲೆ
ಹರ ತಂದಿ ತುಂಬಿ ಇಟ್ಟಾನ

ಚಿಕ್ಕ ಮರಿಗೆ ತನ್ನ ರೆಕ್ಕಿಬೀಸಣಿಕೀಲೆ
ಅಕ್ಕ ಜಳಕಕ್ಕ ಹಾಕ್ಯದ ನೋಡವ್ವ
ಹಕ್ಕಿಜಾತ್ಯಾನ ಅಕ್ಕರತೆ

ಅಂತರಗಂಗೀವ್ಯಾಗ ಕುಂತ ಹಕ್ಕೀಜೋಡ
ಅಂತಃಕರಣವ ನೋಡೇನ; ಅಗಲುತಲೆ
ಅಂತರಕೀಲೇನ ಕೂಗ್ಯಾವ

ಜನುಮದ ಜಾತ್ರಿ

ನೇತ್ರಪಲ್ಲವಿಯಿಂದ ಸೂತ್ರಗೊಂಬೀ ಹಾಂಗ
ಪಾತ್ರ ಕುಣಿಸ್ಯಾನ ಒಲುವಿಗಾಗೆ ದಿನದಿನ
ಜಾತ್ರಿಯೆನಿಸಿತ್ತ ಜನುಮವು ೧

ಹುಬ್ಬು ಹಾರಸಿದಾಗ ಹಬ್ಬ ಎನಿಸಿತು ನನಗ
'ಅಬ್ಬ' ಎನಬೇಡಃ ನನ ಗೆಣತಿ ಸಾವಿರಕ
ಒಬ್ಬ ನೋಡವ್ವ ನನ ನಲ್ಲ ೨

ಕಣ್ಣೆವಿ ಎತ್ತಿದರ ಹುಣ್ಣೀವಿ ತೆರಧಾಂಗ
ಕಣ್ಣು ಏನಂತ ಬಣ್ಣಿಸಲೆ ಚಿತ್ತಕ್ಕ
ಕಣ್ಣು ಬರೆಧಾಂಗ ಕಂಡಿತ್ತು ೩

ಹೇಸಿರಲು ಈ ಜೀವ ಆಸಿ ಹುಟ್ಟಿಸುತಿತ್ತು
ಮಿಾಸಿ ಮೇಲೆಳೆದ ಕಿರಿಬೆರಳು ಕೆಂಗಯ್ಯ
ಬೀಸಿ ಕರೆದಾನ ನನಗಂತ ೪

ತಂಬುಲತುಟಿ ನಗಿ ಹೊಂಬಿಸಿಲೆಂಬಂತೆ
ಬಿಂಬಿಸಿತವ್ವಾ ಎದಿಯಾಗ ನಂಬೀಸಿ
ರಂಬೀಸಿತವ್ವಾ ಜೀವವ

ಒಲುಮೆಯ ಕಿಚ್ಚು

೧

ನೀರನ ನೋಟಕ್ಕ ನೀರು ಕಡೆದಿತು ಜೀವ
ಧೀರ ಧೈರ್ಯವ ಕಳೆದಾನ ನನ್ನೊಂದ
ತೀರ ಮರುಳಿಯ ಮಾಡ್ಯಾನ

೨

ಸುಗ್ಗಿ ನಗಿ ನಕ್ಕಾಗ ಮೊಗ್ಗಿ ಬಿಚ್ಚಿತ ಒಳಗ
ಹಿಗ್ಗಿ ಪಾಡಾಗಿ ಮಾಗಿಸಿತು ಹರೆಯುವು
ಬಗ್ಗದ ಎದೆಯ ಬಾಗಿಸಿತು

೩

ಮಾಗಿ ಮೂಡಲಗಾಳಿ ತಾಗಿದ ಬನಧಾಂಗ
ಸಾಗ್ಯದ ನನ್ನ ಹರೆಯುವು ಕೋಗಿಲಾ
ಕೂಗಿ ಕರೆತಾರಽ ಸುಗ್ಗಿಯಾ

೪

ಆಡಿ ಜೀವದಗಾಣಾ ನೋಡ ಹಿಂಡಿತು ಪ್ರಾಣಾ
ಕಾಡತಾನ್ಯಾಕಽ ಆ ಜಾಣ ಕೇಳಿಲ್ಲ
ಹಾಡು ತಲ್ಲಣದ ತಿಲ್ಲಾಣ

೫

ಬಾತುಗೋಳಿ ಹಾಂಗ ಚಾತಕದ ಜಾತ್ಯಲ್ಲ
ನಾತನೀರಾಗ ಅದರಾಟ, ಇದರೂಟ
ಮಿಾಸಲಳಿಯದ ಮಳಿಯಾಗ

೬

ಒಲುಮೆಯ ನಚ್ಚೊಂದು ಕುಲುಮೆಯ ಕಿಚ್ಚವ್ವ
ಹುಲುಜೀವ ಕಾದು ಕಮರೀತು ಒಳುಜೀವ
ಒಲುಮಿಗೆ ಹ್ಯಾಂಗೊ ಬಾಳೀತು

ಗಿಣಿ ಹೇಳ !

ಅವಳ ಮೆಲ್ಲುವ ಬಾಯ ಹವಳತುಟಿ ಹಿಂಡುತ್ತ
ನಿವಳ ನಿಂತಾಳ ನಿಲಿವಿಲಿ, ಗಿಣಿ ಹೇಳ
ಇವಳ ಮನವೆಲ್ಲಿ ಇರಬಹುದು ೧

ಅಚ್ಚವಳ ಹಲ್ಲೀಗೆ ಸರಿಮುಚ್ಚು ಮಲ್ಲೀಗೆ
ನಿಚ್ಚನಿರಂತರ ಇದು ಸುಗ್ಗಿ ಗಿಣಿ ಹೇಳ
ಬಿಚ್ಚಿದವ ಏನು ಬಾಡಿದವ ೨

ಕಾಡಿಗೆಗಣ್ಣಿಗೆ ಕಾಡಿಗೆ ತೀಡ್ಯಾಳ
ಕಾಡಿನ ಕಡೆಗೆ ಕಣ್ತಿರುವಿ, ಗಿಣಿ ಹೇಳ
ಪಾಡಿಗೆ ಬಂದಳಿವಳೇನು ೩

ಕಾಂತಾರಕ್ಹೋಗ್ಯಾನ ಕಾಂತ ನಿನ್ನವನೇನ
ಕಾಂತೆ ಏಕಾಂತ ಬಯಸಿದೆ, ಗಿಣಿ ಹೇಳ
ನಿಂತಾಳ ಕಾದು ನಿನಗಾಗಿ ೪

ಪುರುಷ ಕಬ್ಬಿಣಕ್ಕ ಸ್ಪರುಷ ಮಾಡಿಥಾಂಗ
ಪುರುಷನ ಧ್ಯಾನ ಸರಸಿಗೆ, ಗಿಣಿ ಹೇಳ
ಹರುಷ ರೋಮಾಂಚ ತಳೆದಾಳ ೫

ಕಂಡ ತಪ್ಪು

ಒಂದ ಕ್ಷಣಾ ಕಂಡ ತಪ್ಪಿಗೆ — ಎಂದಿನತನಕಾ ಕೊರಗೋದs
— ಕೊರಗೋದs ಮತ್ತ ಸೊರಗೋದs

ಕಂಡ ರೂಪ ಕಂಡರಿಸುತ್ತಾ — ಕಂಡಕಡೆಗೂ ಕೂಡೋದs
— ಕೂಡೋsದ ಮತ್ತ ನೋಡೋದs

ಕನಸಿನೊಳಗೂ ಕಂಡಂತಾದರು — ಕಂಡ್ಹಾಂಗs ಕನವರಸೋದs
— ವರಸೋದs ಮತ್ತ ಬೆರಸೋದs

ಬೆಚ್ಚಿ ಎಚ್ಚತ್ತಾಗ ಕನಸಿನ — ಕನಡಿಯ ನೆರಳ ನೆನಿಯೋದs
— ನೆನಿಯೋದs ಮತ್ತ ಮುನಿಯೋದs

ಕಂಡ ಕಣ್ಣಿಲೆ ಕಂಣೀರ್ ಸುರಿಸಿ — ನೆನೆದ ನೆನಪಿಗೆ ಬಯ್ಯೋದs
— ಬಯ್ಯೋದs ಮತ್ತ ಸುಯ್ಯೋದs

ಬೆಳೆವ ಬದುಕಿಗೆ ಬಾಯಿಬಿಟ್ಟು — ಸುಟ್ಟ ದೈವಕ ನೋಯೋದs
— ನೋಯೋದs ಮತ್ತ ಸಾಯೋದs

ಅದನೂ ಕಾಣದ ಬಾಳೂ ಕೀಳು — ಸಾವs ಮೇಲು ಅಂದೇನs
— ಅಂದೇನs ಮತ್ತ ಮುಂದೇನs

ಒಂದ ಕ್ಷಣಾ ಕಂಡ ತಪ್ಪಿಗೆ
ಎಂದಿನತನಕಾ ಕೊರಗೋದs !

ಚಿತ್ರ

ಕೈಗಲ್ಲ ....
(ಬಳಿಯಲ್ಲಿ ನಲ್ಲನಿಲ್ಲ !)

ಹುಬ್ಬುಗೈಯ್ಯು ....
(ಕಾಣುವುದೆ ದೂರ ವ್ಯೆಯ್ಯು !)

ಗದ್ದ ಬೆರಳು ....
(ಕಂಡಳೇ ನಲುಮೆದಿರುಳು !)

ತೆರೆದ ತೋಳು ....
(ಒಂದಾದವೆರಡುಹೋಳು ?)

ನಗುವು ಬಿಕ್ಕು ....
(ಒಲುಮೆಯುಲಿ ಹಾಸು ಹೊಕ್ಕು !)

ಸಂಸಾರ

ಹುಡುಕ್ತಾನ ಹಿಗ್ಗಿನಾ ದಾರಿ, ಹುಡುಗ ಸುಖದುಃಖ ಸಾಗರಾ ಸೇರಿ
ಮದುವೀಯ ಹಡಗವನ್ನೇರಿ
ಹುಡುಕ್ತಾನ ಹಿಗ್ಗಿನ ದಾರಿ ||ಪ||

ಪೌರಾಣಿಕ :—

" ಛೀಮಾರಿ ಪುರಾಣದ ಕಥೀ ಏನು ಸತಿಪತಿಗೆ ನುಗ್ಗಿದಾ ಗತಿ
' ಸುಟ್ಟು ಬೂದಿ ಕಾಮು ' ಅಂತ ಕೇಳಿ
ಅಳತ ಅದ ಗಾಳಿ
ಸುಗ್ಗಿಯೆದೆ ಸೀಳಿ
ನಾ ನಿನಗ ಕಾಮನ ಮೂರ್ತಿ ನೀನು ನನ ಪೂರ್ತಿ ರತಿಯೇ ಸತಿ
ಛೀಮಾರಿ ಪುರಾಣದ ಕಥಿ " ೧

ಕಾವ್ಯರಸಿಕ :—

" ಏನೈತಿ ಸುಗ್ಗಿಯಾ ಹುರುಡ—ಯಾಕ ಉಳಿದೆಲ್ಲ ತಿಂಗಳಾ ಬರಡ
ಬೇಕ್ಯಾಕ ಮಾವಿನ ಕಾಡು
ಕೋಗಿಲದ ಹಾಡು
ಅಗಲಿಕಿ ಕೇಡು
ನಿನ ತೆಕ್ಕಿಯೊಳಗ ಸಿಕ್ಕೈತಿ ಸುಗ್ಗಿ ಸ್ವರ್ಗಕ್ಕ ಸಾಕು ತೋಳೆರಡs
ಏನೈತಿ ಸುಗ್ಗಿಯಾ ಹುರುಡ ? " ೨

ಪ್ರೀತಿ :—

"ನಿನ ಸ್ಪರ್ಶ ಹರ್ಷದಾ ಚಿಲುಮಿ—ಅಲ್ಲಿ ನೀರಾಟವಾಡತದ ಒಲುಮಿ
ನೀನಂತಿಯಂತ ನಾ ನೀರ
ನೀನ ಆಹಾರ
ಮತ್ತ ನನ ನೀರ
ಗಾಳಿಗೆ ಬೇರಿ ಮೈಸೊಂಕಿ ಹೊತ್ತಿತಽ ಬೆಂಕಿ ಕಮ್ಮರನ ಕುಲುಮಿ
ನಿನ ಸ್ಪರ್ಶ ಹರ್ಷದಾ ಚಿಲುಮಿ" ೩

ಕೌಟುಂಬಿಕ :—

"ಮಕ್ಕಳ ಮಾಣಿಕದ ಕಣಿ ಸಿಕ್ಕಿ ನೀ ಚೊಕ್ಕ ಚಿಂತಾಮಣಿ
ಮಾತೆಲ್ಲ ಮುತ್ತಿನ ಎಳಿ
ಜೇನಿನ ಥಳಿ
ಹಿಗ್ಗಿನ ತೊಳಿ
ಮುಂಗಯ್ಯಮ್ಯಾಲೆ ಮುದ್ದುಂಡು ಬೀರತಾವ ಮುದ್ದುಮಾತಿನ ಗಿಣಿ
ಮಕ್ಕಳ ಮಾಣಿಕದ ಕಣಿ" ೪

ಕನಸಿಗ :—

"ನಾ ಕಂಡ ಬೆಳಕಿನ ಹಣ್ಣ ನೀನು ನೀನಲ್ಲ ಚಿತ್ರದ ಹೆಣ್ಣ
ನನಗ್ಯಾಕ ಹುಬ್ಬಿನ ಡೊಂಕ
ಎವಿಗಳ ಬಿಂಕ
ಕಣ್ಣುಗಳ ಸುಂಕ
ನನ ಚಿತ್ತದಾಗಿನ ಚಿತ್ರಗಾರ ಬರೆದಾನ ಚಿತ್ತಕ ಕಣ್ಣ
ನಾ ಕಂಡ ಬೆಳಕಿನ ಹಣ್ಣ" ೫

ಮುಗಿತಾಯ :—

ನೆರಿತಽದ ಚಿಕ್ಕಿಗಳ ಜಾತ್ರಿ ಮುಗಿಲಿನ್ಯಾಗ ದಿನದ ದೇವರ ಯಾತ್ರಿ
ಮನಿಮನಿಗೆ ಜೋಡಿಯ ಬೆಟ್ಟ
ವೈಯು ಮನಮುಟ್ಟ
ಜೇನಹುಟ್ಟ ಕಟ್ಟ
ಅನ್ಯತಂತ ಬಾಯಿ ಚಪ್ಪರಸತಾವ ಕೇಳಿ ಕಣ್ಣ ಮಿಟಕತದ ರಾತ್ರಿ
ನೆರಿತಽದ ಚಿಕ್ಕಿಗಳ ಜಾತ್ರಿ ೬